# ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:–* ಶ್ರೀಮತಿ ಚಿತ್ರಲೇಖಪಾಟೀಲ್, ಹಿಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಿಂಧನೂರು ಮತ್ತು ಶ್ರೀ ಎಂ.ಎಂ.ಮೊಗಾರೆ, ಕಿರಿಯ ಇಂಜಿನಿಯರ್ ಇವರ ವಿರುದ್ಧದ ಆರೋಪಗಳ ಕುರಿತು ಇಲಾಖೆ ವಿಚಾರಣೆ, ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸುವ ಬಗ್ಗೆ – ಆದೇಶ.

*ಓದಲಾಗಿದೆ:*

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 1 ಇಎನ್‌ಕ್ಯೂ 12, ದಿನಾಂಕ:30.1.2012.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂಖ್ಯೆ: ಲೋಕ್/ಐ.ಎನ್.ಕ್ಯೂ/14–ಎ/66/2012/ಎಆರ್‌ಇ-9, ದಿ:24.10.2017. ಅದರೊಂದಿಗೆ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು, ಸಂಬಂಧಿಸಿದ ದಾಖಲೆಗಳು.
3. ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 100 ಇಎನ್‌ಕ್ಯೂ 2017, ದಿ:15.12.2017
4. 2 ನೇ ಕಾರಣ ಕೇಳುವ ನೋಟಿಸ್‌ಗೆ ವಿವರಣೆ ದಿನಾಂಕ:
   1. ಎಂ.ಹೆಚ್.ಭೀಮಕ್ಕನವರ್ – ದಿ:02.2.2018.
   2. ಎಂ.ಎನ್.ಪಾಟೀಲ್ – ದಿ:02.2.2018
   3. ಶ್ರೀಮತಿ ಚಿತ್ರಲೇಖಪಾಟೀಲ್– ದಿ: 31.1.2018.
   4. ಎ.ಎಂ.ಮೊಗಾರೆ– ದಿ:02.2.2018

*ಪ್ರಸ್ತಾವನೆ:–*

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ಕೈಗೊಳ್ಳಲಾಗಿದ್ದ ವಿವಿಧ ಕಾಮಗಾರಿಗಳ ಅನುಷ್ಠಾನದಲ್ಲಿ ತೀವ್ರತರವಾದ ಕರ್ತವ್ಯಲೋಪವೆಸಗಿ ಹಣ ದುರುಪಯೋಗವಾಗಿರುವ ಬಗ್ಗೆ ಸ್ವೀಕೃತವಾಗಿದ್ದ ಮನವಿಯನ್ನು ಆಧರಿಸಿ ಮಾನ್ಯ ಉಪಲೋಕಾಯುಕ್ತರವರು ತನಿಖೆಯನ್ನು ಕೈಗೊಂಡಿದ್ದು, ತನಿಖೆಯಲ್ಲಿ ವಿವಿಧ ಕಾಮಗಾರಿಗಳ ಅನುಷ್ಠಾನದಲ್ಲಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಲೋಕಾಯುಕ್ತ ಕಾಯ್ದೆ ಕಲಂ 12(3) ರ ಅನುಸಾರ ದಿ:16.12.2011 ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರುಗಳ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಸದರಿ ವರದಿಯನ್ನು ಪರಿಗಣಿಸಿ ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ: 30.1.2012 ರ ಆದೇಶದಲ್ಲಿ ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ಕೈಗೊಳ್ಳಲಾಗಿದ್ದ (1) ಸಾರ್ವಜನಿಕ ಕೃಷಿ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿ, (2) ಫೋರ್ಟ್ ಏರಿಯಾದಲ್ಲಿ ಸಾರ್ವಜನಿಕ ಗ್ರಂಥಾಲಯ ಕಟ್ಟಡ ಕಾಮಗಾರಿ, (3) ಎನ್.ಜಿ.ಓ ಕಾಲೋನಿಯಲ್ಲಿ ಸಾರ್ವಜನಿಕ ಗ್ರಂಥಾಲಯ ನಿರ್ಮಾಣ ಕಾಮಗಾರಿ ಮತ್ತು (4)

ಸೋಮಲಾಪುರದ ಗ್ರಾಮದಲ್ಲಿ ಈಶ್ವರ ಸಾರ್ವಜನಿಕ ಗ್ರಂಥಾಲಯ ಕಾಮಗಾರಿಗಳಲ್ಲಿ ಅನುಷ್ಠಾನದಲ್ಲಿ ತೀವ್ರತರದ ಕರ್ತವ್ಯ ಲೋಪ ಹಾಗೂ ಹಣ ದುರುಪಯೋಗವಾಗಿರುವ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡ ಅಧಿಕಾರಿ / ನೌಕರರ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957 ರ ನಿಯಮ 11 ರಡಿ ನಡೆಸುವ ಸಲುವಾಗಿ ಸದರಿ ನಿಯಮಗಳ ನಿಯಮ 14ಎ ರ ಅನುಸಾರ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

1. **ಎಂ.ಹೆಚ್.ಭೀಮಕ್ಕನವರ್, ಹಿಂದಿನ ಕಾ.ಇಂ. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಯಚೂರು.**
2. **ಎಂ.ಎನ್.ಪಾಟೀಲ್, ನಿವೃತ್ತ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ ಸಿಂಧನೂರು.**
3. **ಶ್ರೀಮತಿ ಚಿತ್ರಲೇಖ ಪಾಟೀಲ್, ಹಿಂದಿನ ಸಹಾಯಕ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ ಸಿಂಧನೂರು.**
4. **ಎ.ಎಂ.ಮೊಗಾರೆ, ಕಿರಿಯ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ, ಸಿಂಧನೂರು.**

ಸದರಿ ಆದೇಶದ ಅನುಸಾರ ಪ್ರಕರಣದ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಅಪರ ನಿಬಂಧಕರು, ವಿಚಾರಣೆಗಳು-4 ಇವರನ್ನು ಕರ್ನಾಟಕ ಲೋಕಾಯುಕ್ತ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಯವರು ಪ್ರಕರಣದಲ್ಲಿ ಮೇಲೆ ತಿಳಿಸಿರುವ ಆಪಾದಿತರುಗಳ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ಕೈಗೊಂಡು ಸಲ್ಲಿಸಿರುವ ವರದಿಯಲ್ಲಿ ಆಪಾದಿತರುಗಳ ವಿರುದ್ಧದ ಆರೋಪಗಳು ಸಾಬೀತಾಗಿವೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಮಾನ್ಯ ಉಪಲೋಕಾಯುಕ್ತರವರು ಇಲಾಖಾ ವಿಚಾರಣೆಯನ್ನು ಪರಿಶೀಲಿಸಿ ವಿಚಾರಣಾವರದಿಯಲ್ಲಿ ಆಕ್ಷೇಪಿಸಬಹುದಾದ ಯಾವುದೇ ಅಂಶಗಳು ಕಂಡು ಬಾರದ ಕಾರಣ ವಿಚಾರಣಾ ವರದಿಯನ್ನು ಅಂಗೀಕರಿಸಲು ಹಾಗೂ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ನಿಬಂಧಕರು, ಕರ್ನಾಟಕ ಲೋಕಾಯುಕ್ತರವರು ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:24.10.2017 ರ ಪತ್ರದೊಂದಿಗೆ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆರೋಪಿತರ ವಿರುದ್ಧದ ಆರೋಪಗಳ ಕುರಿತು ಶಿಸ್ತು ಪ್ರಾಧಿಕಾರದ ಪರವಾಗಿ ಒಬ್ಬರು ಸಾಕ್ಷಿದಾರರು ಹಾಗೂ 14 ದಾಖಲೆಗಳನ್ನು ಪರಿಶೀಲಿಸಿದ್ದು ಆರೋಪಿತರ ಪರವಾಗಿ ಮೂರು ಸಾಕ್ಷಿ ಹಾಗೂ 6 ದಾಖಲೆಗಳನ್ನು ಪರಿಗಣಿಸಿ, ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಎಲ್ಲಾ ಆರೋಪಿತರ ವಿರುದ್ಧದ ಆರೋಪಗಳು ವಿಚಾರಣೆಯಲ್ಲಿ ಸಾಭೀತಾಗುತ್ತವೆ ಎಂಬ

ನಿರ್ಣಯದೊಂದಿಗೆ ವರದಿ ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯನ್ನು ಅನುಸರಿಸಿ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಸರ್ಕಾರವು ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಆಪಾದಿತರುಗಳಿಗೆ ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ:15.12.2017 ರ ಕಾರಣ ಕೇಳುವ ನೋಟಿಸಿನೊಂದಿಗೆ ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಲಗತ್ತಿಸಿ, ಈ ಕುರಿತಂತೆ ಅಹವಾಲುಗಳು ಏನಾದರೂ ಇದ್ದಲ್ಲಿ ನಿಗಧಿತ ಕಾಲಾವಧಿಯೊಳಗೆ ಸಲ್ಲಿಸಲು ಸೂಚಿಸಲಾಗಿತ್ತು.

ಪ್ರತಿಯಾಗಿ ಮೇಲೆ ಓದಲಾದ ಕ್ರಮಾಂಕ (4) ರನ್ವಯ ಎಲ್ಲಾ ನಾಲ್ಕು ಮಂದಿ ಆರೋಪಿತರು ತಮ್ಮ ವಿವರಣೆಯನ್ನು ಸಲ್ಲಿಸಿ ತಮ್ಮನ್ನು ಆರೋಪ ಮುಕ್ತರನ್ನಾಗಿ ಮಾಡಿ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ದಾಖಲೆಗಳು, ಸಾಕ್ಷಿಗಳ ಹೇಳಿಕೆಗಳು ಹಾಗೂ ಆಪಾದಿತರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿನ ಅಂಶಗಳನ್ನು ಪರಿಗಣಿಸಿರುತ್ತದೆ. ಪ್ರಸಕ್ತ ಪ್ರಕರಣದಲ್ಲಿ ಒಟ್ಟು 04 ಆರೋಪಗಳನ್ನು ಮಾಡಲಾಗಿದೆ. ಮೊದಲನೇ ಆರೋಪದಲ್ಲಿ (1) ಶ್ರೀ ಎಂ.ಹೆಚ್.ಭೀಮಕ್ಕನವರ್, (2) ಶ್ರೀ ಎಂ.ಎನ್.ಪಾಟೀಲ್ ಹಾಗೂ (3) ಶ್ರೀ ಎ.ಎಂ.ಮೊಗಾರೆ ಇವರುಗಳು 2005-06 ನೇ ಸಾಲಿನಲ್ಲಿ ವಿಧಾನಸಭೆ ಸದಸ್ಯರ ಅನುದಾನದಲ್ಲಿ ಸಿಂಧನೂರು ಪಟ್ಟಣದ ಕೃಷಿ ಇಲಾಖೆ ಆವರಣದಲ್ಲಿ 'ಸಾರ್ವಜನಿಕ ಕೃಷಿ ಗ್ರಂಥಾಲಯ ಕಟ್ಟಡ' ಅಂದಾಜು ವೆಚ್ಚ 4.75 ಲಕ್ಷ ರೂ.ಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಪಡೆದು ಸದರಿ ಹಣದಿಂದ ಕೃಷಿ ಇಲಾಖೆಯ ಹಾಲಿ ಕಟ್ಟಡವನ್ನು ಅಭಿವೃದ್ಧಿ ಪಡಿಸಿ, ಅದರಲ್ಲಿ ಶಾಸಕರ ಕೊಠಡಿಗೆ ಬೇಕಾದ ಪಿಠೋಪಕರಣಗಳು, ವಿಧ್ಯುತ್ ಜೋಡಣೆ ಸಾಮಗ್ರಿಗಳು, ನೆಲಹಾಸು, ಫಾಲ್ಸ್ ಸೀಲಿಂಗ್ ಐಟಂಗಳನ್ನು ನಮೂದಿಸಿ, ಅದರಂತೆ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೆಂದು, ಕೃಷಿ ಗ್ರಂಥಾಲಯಕ್ಕೆ ಅವಶ್ಯಕತೆ ಇರುವ ಅಥವಾ ಪೂರಕವಾದ ಯಾವುದೇ ಕಾಮಗಾರಿಗಳನ್ನು ನಿರ್ವಹಿಸದೇ ನೇಮಿತ ಕಾಮಗಾರಿಗೆ ವ್ಯತಿರಿಕ್ತವಾಗಿ ಕಾಮಗಾರಿ ನಿರ್ವಹಿಸುವ ಮೂಲಕ ಕರ್ತವ್ಯದಲ್ಲಿ ಸಂಪೂರ್ಣ ಪ್ರಮಾಣಿಕತೆ ಮತ್ತು ಕರ್ತವ್ಯ ನಿಷ್ಠೆ ಪ್ರದರ್ಶಿಸಲು ವಿಫಲರಾಗಿರುವ ಬಗ್ಗೆ ಆರೋಪಿಸಲಾಗಿದೆ.

**ಎರಡನೇ ಆರೋಪದಲ್ಲಿ** (1) ಎಂ.ಹೆಚ್.ಭೀಮಕ್ಕನವರ್, ಕಾ.ಇಂ (2) ಎಂ.ಎನ್.ಪಾಟೀಲ್, ಸ.ಕಾ.ಇಂ. (3) ಚಿತ್ರಲೇಖ ಪಾಟೀಲ್, ಸಹಾಯಕ ಇಂಜಿನಿಯರ್ ಇವರುಗಳು ಸಿಂಧನೂರು ಪಟ್ಟಣದ ಪೋರ್ಟ್ ಏರಿಯಾದಲ್ಲಿ ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿಯ ಹೆಸರಿನಲ್ಲಿ 3.50 ಲಕ್ಷ ರೂ.ಗಳಿಗೆ ಮಂಜೂರಾತಿ ಪಡೆದು ಸದರಿ ಹಣವನ್ನು ಅಂದಾಜು ಪಟ್ಟಿಯ ಅನುಗುಣವಾಗಿ ಗ್ರಂಥಾಲಯಕ್ಕೆ ಬೇಕಾದ ಅವಶ್ಯಕತೆ ಇರುವ ಅಥವಾ ಪೂರಕವಾದ ಯಾವುದೇ ಕಾಮಗಾರಿಗಳನ್ನು ಮಾಡದೇ ಕರ್ನಾಟಕ ಭೂ ಸೇನಾ ನಿಗಮದವರು ನಿರ್ಮಿಸಿರುವ ಶಾದಿ ಮಹಲ್ ಕಟ್ಟಡಕ್ಕೆ (1) ಸೆಪ್ಟಿಕ್ ಟ್ಯಾಂಕ್ (2) ಒಂದನೇ ಮಹಡಿಯ 2 ಕೊಠಡಿಗಳಿಗೆ

---4

ನೆಲಹಾಸು ಹಾಗೂ ಗೋಡೆ (3) ಶೌಚಾಲಯ ಕೊಠಡಿಗೆ ಗೋಡೆ ಬಾಗಿಲು ಅಳವಡಿಸಿರುವ ಕಾಮಗಾರಿಗಳಿಗೆ ಸರ್ಕಾರದ ಹಣ ಪಾವತಿಸಿ, ದುರ್ಬಳಕೆ ಮಾಡಿ ಕರ್ತವ್ಯದಲ್ಲಿ ಸಂಪೂರ್ಣ ಪ್ರಾಮಾಣಿಕತೆ ಮತ್ತು ಕರ್ತವ್ಯ ನಿಷ್ಠೆ ಪ್ರದರ್ಶಿಸಲು ವಿಫಲರಾಗಿರುವ ಬಗ್ಗೆ ಆರೋಪಿಸಲಾಗಿದೆ.

**ಮೂರನೇ ಆರೋಪದಲ್ಲಿ** (1) ಎಂ.ಹೆಚ್.ಭೀಮಕ್ಕನವರ್, ಕಾ.ಇಂ (2) ಎಂ.ಎನ್.ಪಾಟೀಲ್, ಸ.ಕಾ.ಇಂ. (3) ಎ.ಎಂ. ಮೊಗಾರೆ, ಕಿ.ಇಂ, ಇವರುಗಳು ಸಿಂಧನೂರು ಪಟ್ಟಣ ಎನ್.ಜಿ.ಓ ಕಾಲೋನಿಯಲ್ಲಿ ಅಂದಾಜು ವೆಚ್ಚ 3.50 ಲಕ್ಷ ರೂ.ಗಳ ವೆಚ್ಚದಲ್ಲಿ ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಮಂಜೂರಾತಿ ಪಡೆದು ನಂತರ ಬಸವ ಕೇಂದ್ರ ಪ್ರಸಾದ ನಿಲಯಕ್ಕೆ ಹೊಂದಿಕೊಂಡಿರುವ ಖಾಸಗಿ ಜಾಗದಲ್ಲಿ ಕಟ್ಟಡ ನಿರ್ಮಿಸಿರುವುದು, ನಂತರ ಸದರಿ ಜಾಗವನ್ನು ಸರ್ಕಾರದ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳದೇ ಕಟ್ಟಡವನ್ನು ಅಪೂರ್ಣವಾಗಿ ನಿರ್ಮಿಸಿ ಕರ್ತವ್ಯದಲ್ಲಿ ಸಂಪೂರ್ಣ ಪ್ರಮಾಣಿಕತೆ ಮತ್ತು ಕರ್ತವ್ಯ ನಿಷ್ಠೆ ಪ್ರದರ್ಶಿಸಲು ವಿಫಲರಾಗಿರುವ ಬಗ್ಗೆ ಆರೋಪಿಸಲಾಗಿದೆ.

**ನಾಲ್ಕನೇ ಆರೋಪದಲ್ಲಿ** (1) ಎಂ.ಹೆಚ್.ಭೀಮಕ್ಕನವರ್, ಕಾ.ಇಂ (2) ಎಂ.ಎನ್.ಪಾಟೀಲ್, ಸ.ಕಾ.ಇಂ. (3) ಎ.ಎಂ. ಮೊಗಾರೆ, ಕಿ.ಇಂ ಇವರುಗಳು ಸೋಮಲಾಪುರ ಗ್ರಾಮದಲ್ಲಿ ಈಶ್ವರ ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಅಂದಾಜು ವೆಚ್ಚ 3.00 ಲಕ್ಷ ರೂ.ಗಳಿಗೆ ಮಂಜೂರಾತಿ ಪಡೆದು ಕಟ್ಟಡವು ಅಪೂರ್ಣವಾಗಿದ್ದು, ಕಟ್ಟಡ ಪೂರ್ಣಗೊಳಿಸಲು ಅವಶ್ಯವಾದ ಕಟ್ಟಡಕ್ಕೆ ಅವಶ್ಯವಾದ ಕಿಟಕಿ ಬಾಗಿಲುಗಳು, ಇಟ್ಟಿಗೆ ಗೋಡೆಗೆ ಗಿಲಾವು, ನೆಲಹಾಸು ಗೋಡೆಗೆ ಸುಣ್ಣಬಣ್ಣ ಇಲ್ಲದೇ ಇರುವುದು ಹಾಗೂ ಕಟ್ಟಡದ ಒಳಭಾಗದಲ್ಲಿ ಸಾರ್ವಜನಿಕರು ಪೂಜಿಸುತ್ತಿದ್ದ ಬಸವನ ವಿಗ್ರಹವಿರುವುದು ಕಂಡುಬಂದಿದ್ದು, ಸದರಿ ಕಟ್ಟಡದ ಬೆಳವಣಿಗೆಗಳು ಸದರಿ ವಿಗ್ರಹಕ್ಕೆ ಪೂರಕವಾಗಿರುವಂತೆ ನಿರ್ಮಿಸಿರುವುದು ಕಂಡು ಬಂದಿದ್ದು, ಈ ಮೂಲಕ ಸರ್ಕಾರದ ಹಣ ದುರ್ಬಳಕೆ ಮಾಡಿ ಕರ್ತವ್ಯದಲ್ಲಿ ಸಂಪೂರ್ಣ ಪ್ರಮಾಣಿಕತೆ ಮತ್ತು ಕರ್ತವ್ಯ ನಿಷ್ಠೆ ಪ್ರದರ್ಶಿಸಲು ವಿಫಲರಾಗಿರುವ ಬಗ್ಗೆ ಆರೋಪಿಸಲಾಗಿದೆ.

ಮೇಲ್ಕಂಡ ಆರೋಪಗಳ ಕುರಿತು ವಿಚಾರಣಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರ ಒಂದು ಸಾಕ್ಷಿ ಹಾಗೂ 14 ದಾಖಲೆಗಳನ್ನು ಗುರುತಿಸಿಕೊಂಡಿದ್ದು, ಮೂವರು ಆರೋಪಿತರ ಹೇಳಿಕೆ ಹಾಗೂ 6 ದಾಖಲೆಗಳನ್ನು ಪರಿಗಣಿಸಿರುತ್ತಾರೆ. ಮುಖ್ಯವಾಗಿ ಶಿಸ್ತು ಪ್ರಾಧಿಕಾರದ ಸಾಕ್ಷಿ ಶ್ರೀ ನಾಗರಾಜ್ ಇವರು ಪಾಟೀ ಸವಾಲಿನಲ್ಲಿ ತನಿಖಾ ವರದಿಯಲ್ಲಿ ನೀಡಿದ್ದ ಅಂಶಗಳನ್ನು ಸಮರ್ಥಿಸಿಕೊಂಡಿರುತ್ತಾರೆ.

2 ನೇ ಕಾರಣ ಕೇಳುವ ನೋಟಿಸ್‌ಗೆ ಪ್ರತಿಯಾಗಿ ಆರೋಪಿತರ ಪೈಕಿ ಶ್ರೀಮತಿ ಚಿತ್ರಲೇಖ ಪಾಟೀಲ್ ಇವರನ್ನು ಹೊರತುಪಡಿಸಿ ಉಳಿದ ಮೂವರು ಅಧಿಕಾರಿ / ನೌಕರರು ನಿಗಧಿತ ಕಾಲಾವಧಿಯಲ್ಲಿ ವಿವರಣೆಯನ್ನು ಸಲ್ಲಿಸಿದ್ದು, ಸದರಿ ವಿವರಣೆಯು ಒಂದೇ ರೀತಿ ಇರುತ್ತದೆ. ಅವರು ಸಲ್ಲಿಸಿರುವ ವಿವರಣೆಯಲ್ಲಿನ ಅಂಶಗಳೆಂದರೆ, ಆರೋಪ ಪಟ್ಟಿಯಲ್ಲಿ ಇಬ್ಬರು ಸಾಕ್ಷಿಗಳನ್ನು ಗುರುತಿಸಿದ್ದು, ಆದರೆ 1ನೇ ಸಾಕ್ಷಿಯಾದ ದೂರುದಾರರ ಹೇಳಿಕೆಯನ್ನು ಪಡೆದಿರುವುದಿಲ್ಲವೆಂದು, ಕೇವಲ ತನಿಖಾಧಿಕಾರಿ ಶ್ರೀ ಕೆ.ಎಸ್.ನಾಗರಾಜ್, ಕಾ.ಇಂ, ಇವರ ಹೇಳಿಕೆಯನ್ನು ಪಡೆದು ಕೆಲವೇ ದಾಖಲೆಗಳನ್ನು ಪರಿಗಣಿಸಲಾಗಿದೆಯೆಂದು, ತಾವುಗಳು ಲಿಖಿತ ವಾದಗಳನ್ನು ಸಲ್ಲಿಸಲಾಗಿದ್ದರೂ ಸಹ ಅವುಗಳನ್ನು ಪರಿಶೀಲನೆ ಮಾಡದೇ ಏಕ ಪಕ್ಷಿಯವಾಗಿ ಆರೋಪಗಳು ಸಾಭೀತಾಗುತ್ತವೆ ಎಂಬ ನಿರ್ಣಯದೊಂದಿಗೆ ವರದಿ ಸಲ್ಲಿಸಲಾಗಿದೆಯೆಂದು, ಮಾನ್ಯ ಉಪಲೋಕಾಯುಕ್ತರವರು ಮಾಡುವ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುವ ಅಥವಾ ಒಪ್ಪಿಕೊಳ್ಳದೇ ಇರುವ ಬಗ್ಗೆ ಸಂಪೂರ್ಣ ಅಧಿಕಾರವು ಶಿಸ್ತು ಪ್ರಾಧಿಕಾರಕ್ಕೆ ಮಾತ್ರ ಇದ್ದು ಸಂಪೂರ್ಣ ದಾಖಲೆಗಳನ್ನು ಮರು ಪರಿಶೀಲಿಸುವಂತೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 23485/15 ರಲ್ಲಿ ದಿನಾಂಕ:24.11.2016 ರಂದು ನೀಡಿರುವ ತೀರ್ಪನ್ನು ಉಲ್ಲೇಖಿಸಿ, ತಮಗೆ ನ್ಯಾಯ ದೊರಕಿಸಿಕೊಡುವಂತೆ ಕೋರಿರುತ್ತಾರೆ.

ಶ್ರೀಮತಿ ಚಿತ್ರಲೇಖಾ ಪಾಟೀಲ್, ಹಿಂದಿನ ಸಹಾಯಕ ಇಂಜಿನಿಯರ್ ಇವರು ಸಲ್ಲಿಸಿರುವ ವಿವರಣೆಯಲ್ಲಿ 2005-06 ನೇ ಸಾಲಿನಲ್ಲಿ ಸಿಂಧನೂರಿನ ಪೋರ್ಟ್ ಏರಿಯಾದಲ್ಲಿ ಕರ್ನಾಟಕ ಭೂ ಸೇನಾ ನಿಗಮದಿಂದ ಶಾದಿ ಮಹಲ್ ಕಾಮಗಾರಿಯನ್ನು ನಿರ್ವಹಿಸಲಾಗಿದ್ದು 2 ಕೋಣೆಗಳ ನೆಲಹಾಸು ಶೌಚಾಲಯ ಗೋಡೆಗಳು ಅಪೂರ್ಣಗೊಂಡಿದ್ದು, ಸದರಿ ಕಟ್ಟಡದ ಮೇಲೆ ಗ್ರಂಥಾಲಯವನ್ನು ನಿರ್ಮಿಸಲು 3.50 ಲಕ್ಷ ರೂ.ಗಳಿಗೆ ಅಂದಾಜು ತಯಾರಿಸಿ, ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೆಂದು, ಆ ಸ್ಥಳವು ಸರ್ಕಾರದ್ದಾಗಿದ್ದು, ಕಟ್ಟಡ ಕಟ್ಟಿದ ನಂತರ ನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ ಎಂದು, ಈ ಕಾಮಗಾರಿಯಲ್ಲಿ ಯಾವುದೇ ರೀತಿಯ ಹಣ / ಅಧಿಕಾರ ದುರಪಯೋಗ ಪಡಿಸಿಕೊಂಡಿರುವುದಿಲ್ಲವೆಂದು, ಕಟ್ಟಡವು ಈಗಲೂ ಸುಸ್ಥಿತಿಯಲ್ಲಿರುತ್ತದೆಯೆಂದು ತಿಳಿಸಿ, ತಮ್ಮನ್ನು ಆರೋಪಗಳಿಂದ ಮುಕ್ತಗೊಳಿಸುವಂತೆ ಕೋರಿದ್ದಾರೆ.

ಮುಖ್ಯವಾಗಿ ಆರೋಪಿತರು ತಮ್ಮ ವಿರುದ್ಧದ ಆರೋಪಗಳಿಗೆ ಪ್ರತಿಯಾಗಿ ಸಲ್ಲಿಸಿರುವ ಹೇಳಿಕೆಗಳು ಪೂರಕವಾಗಿರುವುದಿಲ್ಲ. ಅಂದರೆ, ಖಾಸಗಿ ಸ್ಥಳದಲ್ಲಿ ಸರ್ಕಾರದ ಅನುದಾನ ಬಳಸಿ ಕಟ್ಟಡವನ್ನು ನಿರ್ಮಾಣ ಮಾಡಿರುವ ಆರೋಪವಿದ್ದು, ಕಟ್ಟಡವನ್ನು ನಿರ್ಮಿಸಿರುವ ಜಾಗವು ಸರ್ಕಾರಕ್ಕೆ ಸೇರಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಇರುವುದು, ಕಟ್ಟಡವನ್ನು ಮಂಜೂರಾದ ಅಂದಾಜಿನಂತೆ ನಿರ್ವಹಿಸದೆ ಮಾರ್ಪಟುಗಳನ್ನು

---6

ಮಾಡಿಕೊಂಡಿದ್ದು, ದೂರು ದಾಖಲಾದ ನಂತರ ಮಾರ್ಪಡಿಸಿದ ಯೋಜನೆಗಳಿಗೆ ಅನುಮೋದನೆ ಪಡೆಯಲು ಕ್ರಮವಹಿಸಿರುವಂತಹ ಅಂಶಗಳು ವಿಚಾರಣೆಯಲ್ಲಿ ಕಂಡು ಬಂದಿರುತ್ತವೆ. ಅಪಾಧಿತರು ಇವುಗಳನ್ನು ಅಲ್ಲಗೆಳೆಯುವಂತಹ ಯಾವುದೇ ದಾಖಲೆಗಳು / ಹೇಳಿಕೆಗಳನ್ನು ವಿಚಾರಣಾ ಸಂದರ್ಭದಲ್ಲಿಯಾಗಲೀ ಅಥವಾ 2 ನೇ ಕಾರಣ ಕೇಳುವ ನೋಟಿಸ್‌ಗೆ ಸಲ್ಲಿಸಿರುವ ವಿವರಣೆಯಲ್ಲಾಗಲೀ ನಮೂದಿಸಿರುವುದಿಲ್ಲ.

ಆರೋಪಿತರುಗಳು ಆಕ್ಷೇಪಿತ ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಿರುವುದು, ಅವುಗಳಿಗೆ ತಾಂತ್ರಿಕ ಮಂಜೂರಾತಿ ಪಡೆದಿರುವುದು, ಮಂಜೂರಾದ ಅಂದಾಜಿನಂತೆ ಐಟಂಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸಿ ಹಣ ಪಾವತಿಸಿರುವುದು ಸ್ಪಷ್ಟವಿದ್ದು, ಆಕ್ಷೇಪಿತ ಕಾಮಗಾರಿಗಳನ್ನು ಮಂಜೂರಾದ ಅಂದಾಜು ಪಟ್ಟಿಯಂತೆ ಸರ್ಕಾರಿ ಸ್ಥಳದಲ್ಲಿ ನಿರ್ಮಿಸಿರುವುದನ್ನು ಸಮರ್ಥಿಸುವ ಯಾವುದೇ ದಾಖಲೆಗಳನ್ನು ಅಪಾದಿತರು ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ, ಆಕ್ಷೇಪಿತ ಕಾಮಗಾರಿಗಳನ್ನು ಮಂಜೂರಾದ ಅಂದಾಜಿನಂತೆ ಅನುಷ್ಠಾನಗೊಳಿಸದೇ ಸಂದರ್ಭಕ್ಕೆ ಅನುಗುಣವಾಗಿ ಕಾಮಗಾರಿಯನ್ನು ಅನುಷ್ಠಾನಗೊಳಿಸಿ, ಕರ್ತವ್ಯ ಲೋಪವೆಸಗಿರುವುದು ಸ್ಪಷ್ಟವಾಗಿರುತ್ತದೆ. ಈ ಕಾರಣದಿಂದ ಆರೋಪಿತರ ವಿವರಣೆಗಳು ವಿಚಾರಣಾ ವರದಿಯಲ್ಲಿನ ನಿರ್ಣಯವನ್ನು ತಳ್ಳಿಹಾಕಲು ಸಮರ್ಥನಿಯವಾಗಿರುವುದಿಲ್ಲ. ಅಪಾದಿತರು ತಮ್ಮ ವಿವರಣೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಪ್ರಕರಣ ಸಂಖ್ಯೆ:23485/15 ರಲ್ಲಿ ದಿನಾಂಕ:24.11.2016 ರಂದು ನೀಡಿರುವ ತೀರ್ಪನ್ನು ಉಲ್ಲೇಖಿಸಿದ್ದು, ಸದರಿ ಪ್ರಕರಣದ ಅಂಶಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ.

ಆರೋಪಿತರ ಪೈಕಿ ಶ್ರೀ ಎಂ.ಹೆಚ್.ಭೀಮಕ್ಕನವರ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಇವರನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಅದೇಶ ಸಂಖ್ಯೆ:ಲೋಇ 394 ಸೇಎಸು 2014, ದಿನಾಂಕ:09.2.2018 ರಲ್ಲಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿರುವುದರಿಂದ ಸದರಿಯವರಿಗೆ ಮಾನ್ಯ ಉಪಲೋಕಾಯುಕ್ತರವರು ಪ್ರಸ್ತಾಪಿಸಿರುವ ದಂಡನೆ ವಿಧಿಸಲು ಸಾಧ್ಯವಾಗುವುದಿಲ್ಲ. ಮತ್ತೊಬ್ಬ ಆರೋಪಿತರಾದ ಶ್ರೀ ಎಂ.ಎನ್.ಪಾಟೀಲ್, ನಿವೃತ್ತ, ಸ.ಕಾ.ಇಂ. ಇವರಿಗೆ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅಧಿಕಾರವಿರುವುದಿಲ್ಲ. ಆದ್ದರಿಂದ ಈ ಇಬ್ಬರು ಆಪಾದಿತರುಗಳ ಪ್ರಸ್ತಾವನೆಯನ್ನು ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಕಳುಹಿಸಲಾಗಿದೆ.

---7

ಉಳಿದಂತೆ, ಶ್ರೀಮತಿ ಚಿತ್ರಲೇಖಾ ಪಾಟೀಲ್, ಹಿಂದಿನ ಸಹಾಯಕ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ ಸಿಂಧನೂರು ಮತ್ತು ಎ.ಎಂ.ಮೊಗಾರೆ, ಕಿರಿಯ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ, ಸಿಂಧನೂರು ಇವರ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 100 ಇಎನ್‌ಕ್ಯೂ 17, ಬೆಂಗಳೂರು, ದಿನಾಂಕ:07.7.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀಮತಿ ಚಿತ್ರಲೇಖಾ ಪಾಟೀಲ್, ಹಿಂದಿನ ಸಹಾಯಕ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ ಸಿಂಧನೂರು ಮತ್ತು ಎ.ಎಂ.ಮೊಗಾರೆ, ಕಿರಿಯ ಇಂಜಿನಿಯರ್, ಪಂ.ರಾ.ಇಂ ಉಪವಿಭಾಗ, ಸಿಂಧನೂರು ಇವರುಗಳ ವಿರುದ್ಧ ಸಾಬೀತಾದ ಆರೋಪಗಳ ಗಂಭೀರತೆಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957 ರ ನಿಯಮ 8(ivಎ) ರ ಅನುಸಾರ ಕಾಲಿಕ ವೇತನ ಶ್ರೇಣಿಯಲ್ಲಿ 2 ಹಂತವನ್ನು ಸಂಚಿತ ಪರಿಣಾಮ ಸಹಿತವಾಗಿ ಕೆಳಗಿಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

07/07/2018

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕ ಪತ್ರ 1&2)/ (ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಬೆಂಗಳೂರು,
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ವೃತ್ತ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸೇವೆಗಳು-ಸಿ ಶಾಖೆ)
8. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಮುಖಾಂತರ)
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.